ಕನ್ನಡದ ಕವಿ ಕುಟುಂಬ ಅಲ್ಲಂನ ವಿದ್ಯಾವರ್ಧಕ ಸಂಘದ ದಿಗಿಲು ಹುಟ್ಟಿಸಿದ ಗ್ರಂಥಾಲಯ, ಸದಾ ಗಾಯನವನ್ನು ಶ್ರುತಿ ಮಾಡಿಕೊಂಡಂತಿದ್ದ ಕಲಾ ಭವನ, ಪುಟ್ಟ ಅರಮನೆಯಂತಿದ್ದ ಕರ್ನಾಟಕ ಕಾಲೇಜು, ಬೇಂದ್ರೆಯವರ ಟೊಪ್ಪಿ, ಛತ್ರಿ, ಹತ್ತುತ್ತಿದ್ದ ಟಾಂಗಾದ ಪರಿಚಯವಿಟ್ಟು ಕಾವ್ಯದ ವಿಳಾಸವಾದ ಸಾಧನಕೇರಿ ಎಲ್ಲ 'ಇದು ಬರಿ ಬೆಳಗಲ್ಲೊ' ಎಂದು ಮಧ್ಯ ರಾತ್ರಿ ಕತ್ತಲನ್ನು ಸೀಳುವ ರೈಲ್ವೆ ಸೈರನ್‌ಗೆ ಖೋಲಿಯ ಮಚ್ಚರದಾನಿ ಕಾಟಿನ ಮೇಲೆ ಸಟ್ಟಕ್ಕನೆ ಎದ್ದು ಕೂರುವಾಗಲೂ ಕಾಡುವ ತಣಿಯದ ದಾಹದ ಬೆರಗಿನ ಚಿತ್ರಗಳಾಗಿದ್ದವು.

◆ ಸಾಹಿತಿಗಳೂ ಸಂಪರ್ಕಕ್ಕೆ ಬಂದಿರಬೇಕು ಆ ದಿನಗಳಲ್ಲಿ.

ಹೌದು, ಅದಾಗಲೇ ಧಾರವಾಡದಲ್ಲಿ ಹಲವು ಸಾಹಿತ್ಯ ಬೇಸಾಯಗಾರರಿದ್ದರು. ನಾನು ಓದುತ್ತಿದ್ದ ಕರ್ನಾಟಕ ಕಾಲೇಜಿಗೆ ಗೆಳೆಯರೊಬ್ಬರನ್ನು ಭೇಟಿಯಾಗಲು ಗಿರೀಶ ಕಾರ್ನಾಡ ಅಚ್ಚ ಬಿಳಿ ಸ್ಕೂಟರ್ ಸವಾರಿ ಮೇಲೆ ಆಗಾಗ ಬಂದು ಹೋಗುವುದನ್ನು ನೋಡುತ್ತಿದ್ದ ನಮಗೆ ಇಡೀ ಕ್ಯಾಂಪಸ್ ರಜತ ಪರದೆಯಂತೆ ಭಾಸವಾಗುತ್ತಿತ್ತು; ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ವೀಣಾ ಶಾಂತೇಶ್ವರ ದಿನವೂ ನನ್ನೊಳಗೆ ಸಾಹಿತ್ಯದ ಕಂಪನವನ್ನೊ ಕಂಪನ್ನೊ ಸೃಷ್ಟಿಸುತ್ತಿದ್ದರು. ಮಿಲ್ಟನ್‌ನ 'ಪ್ಯಾರಾಡೈಸ್ ಲಾಸ್ಟ್'ನ್ನು ಅವಿರತವಾಗಿ, ನಿರರ್ಗಳವಾಗಿ ಪಾಠ ಮಾಡುತ್ತಿದ್ದ ಪ್ರೊ. ನಾರಾಯಣಾಚಾರ್ಯರಿಂದ ಕತೆ, ಸಂಸ್ಕೃತ, ಕನ್ನಡ ಸಾಹಿತ್ಯ ಮೀಮಾಂಸೆಯ ವಿರಾಟ್ ದರ್ಶನವಾಗುತ್ತಿತ್ತು. ಯಾವುದೊ ಕಾರ್ಯಕ್ರಮಕ್ಕೆ ಅಡಿಗರು, ಲಂಕೇಶರು ಬಂದು ಮಾತಾಡಿ ಹೊಸ ಕನಸನ್ನು ಆಹ್ವಾನಿಸಿದ್ದರು; ನಾನುಳಿದ ಓಣಿಯ ಪಕ್ಕದ ಮನೆ ಸಾಲಿ ರಾಮಚಂದ್ರರಾಯರದ್ದು; ಅದಕ್ಕೂ ಮೊದಲು ಕೆ. ಕೃಷ್ಣಮೂರ್ತಿಯವರ ನಿವಾಸ. ಸಪ್ತಾಪುರ ಕ್ರಾಸಿನಲ್ಲಿ ಬಸ್ಸಿಗೆ ಕಾಯುತ್ತಿದ್ದ ಪಂಚಾಕ್ಷರಿ ಮತ್ತಿಗಟ್ಟಿ ಮತ್ತು ಬಸವರಾಜ ಬೆಂಡಿಗೇರಿ; ಅಪರೂಪಕ್ಕೆ ಮಂಗಳವಾರ ಸಂತೆಯಲ್ಲಿ ಹೂವಿನ ಕಸೂತಿಯ ಎರಡು ಚೀಲಗಳನ್ನು ಹಿಡಿದು ಕಾಯಿಪಲ್ಲೆ ಕೊಳ್ಳುತ್ತಿದ್ದ ಬೇಂದ್ರೆಯವರ ದರ್ಶನ; ಮನೋಹರ ಗ್ರಂಥಮಾಲೆಯ ಅಟ್ಟದ ನಿಚ್ಚಣಿಕೆಯನ್ನು ಏರುತ್ತಿದ್ದ ಕೀರ್ತಿನಾಥ ಕುರ್ತಕೋಟಿಯವರು; ವಿಶ್ವವಿದ್ಯಾಲಯದ ಕತೆ ಡಿಪಾರ್ಟ್‌ಮೆಂಟಿನ ತನ್ನ ಚೇಂಬರಿಗೆ ಒಂದು ದಿನ ನನ್ನ ಕರೆದು ಚಂಪಾ ಲೋಹಿಯಾ ಪುಸ್ತಕ ನೀಡಿದರು; ರಾಜೇಂದ್ರ ಚೆನ್ನಿ ಅಸ್ತಿತ್ವವಾದ, ಕಮೂನ ಕಾದಂಬರಿಯ ಹುಚ್ಚು ಹಿಡಿಸಿದರು. ಕತೆ ಕ್ಲಾಸಿನಲ್ಲಿ ಎಲಿಯಟ್, ಏಟ್ಸ್, ಎಮರ್ಸನ್, ಥೋರೊ, ಗಾರ್ಕಿ, ಲೀವಿಸ್, ಶೇಕ್ಸ್‌ಪಿಯರ್, ಟ್ಯಾಗೋರ್, ಅರವಿಂದರು, ಮುಲ್ಕರಾಜ್ ಆನಂದ್, ರಾಜಾರಾವ್ ನನ್ನೊಳಗೆ ಮಿನುಗುವ ನಕ್ಷತ್ರಗಳಾದವು; ಎಲ್.ಐ.ಸಿಯಲ್ಲಿದ್ದ ಕತೆಗಾರ ಗೆಳೆಯ ಮೂರ್ತಿ ಅಂಕೋಲೆಕರ್ ತನ್ನ ಆಫೀಸಿನ ವಾಚನಾಲಯದಿಂದ ಕಾರಂತರ ಕಾದಂಬರಿ, ಚಿತ್ತಾಲ, ಅನಂತಮೂರ್ತಿಯವರ ಕತೆ, ಜಿಡ್ಡು ಕೃಷ್ಣಮೂರ್ತಿಯವರ ಪುಸ್ತಕ ಓದಿಸಿದ; ಗಾಂಧಿಯ ಹಿಂದ್ ಸ್ವರಾಜ, ಶೂಮಾಕರ್‌ನ ಪುಸ್ತಕ, ಲಾರೆನ್ಸ್, ಕಾಫ್ಕಾ, ಯುಂಗ್‌ನ ಓದನ್ನು ಗೀಳಾಗಿಸಿಕೊಂಡು ಗಡ್ಡ ಬಿಟ್ಟು ನಿದ್ದೆಗೆಟ್ಟು ಗೆಳೆಯರ ಖೋಲಿಗಳಿಗೆ ಓಡಾಡಿದೆ. ಗೋಕಾಕ್ ಚಳವಳಿ, ಬಂಡಾಯ ಮೆರವಣಿಗೆಯ ಸಂದರ್ಭದಲ್ಲಿ ಬೀದಿಗೆ ಬಂದೆ; ವಿದ್ಯಾವರ್ಧಕ ಸಭಾಭವನದಲ್ಲಿ ನಡೆಯುತ್ತಿದ್ದ ಘನಘೋರ ಸಾಹಿತ್ಯ ಕಾರ್ಯಕ್ರಮಗಳನ್ನು ಮೂಲೆಯಲ್ಲಿ ಅನಾಮಿಕನಾಗಿ ಕೂತು ಕೇಳಿ ವಿಚಿತ್ರ ತಳಮಳ, ಕಳವಳ, ಹುರುಪಿನಿಂದ ಎದ್ದು ಹೋಗುತ್ತಿದ್ದೆ; ರವಿವಾರ ಮಾಡರ್ನ್ ಟಾಕೀಸಿನ ಕನ್ನಡ ಮತ್ತು ಹಿಂದಿ ಕಲಾತ್ಮಕ ಚಿತ್ರಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ; 'ವಂಶವೃಕ್ಷ', 'ಕಾಡು', 'ಸಂಸ್ಕಾರ', 'ಸ್ವಾಮಿ', 'ನಿಶಾಂತ್', 'ಪಥೇರ್ ಪಾಂಚಾಲಿ' ಸಿನಿಮಾಗಳು, ಓಪನ್ ಏರ್ ಥಿಯೇಟರ್‌ನಲ್ಲಿ ಪ್ರದರ್ಶನವಾಗುತ್ತಿದ್ದ ಬಿ.ವಿ. ಕಾರಂತರ, ಚಂದ್ರಶೇಖರ ಕಂಬಾರರ ನಾಟಕಗಳು ನನಗೆ ಸಾಹಿತ್ಯ ಲೋಕಕ್ಕೆ ಹಾರಲು ಬೇಕಾದ ರೆಕ್ಕೆಗಳನ್ನು